# ಹೊಸ ಮಾಲು ಹಳೆ ಗುಜರಿ ಕೂಡಿರಲು

– 37ನೇ ಪುಟದಿಂದ

ಇನ್ನು ದೇವರ ವಿಚಾರಕ್ಕೆ ಬಂದರೆ ನನ್ನಾಕೆ ಪರಮ ದೈವಭಕ್ತೆ. ನಾವು ಆಗಾಗ ಕುಟುಂಬ ಸಮೇತ ತೀರ್ಥಕ್ಷೇತ್ರಗಳ ಭೇಟಿ ಕೊಡುತ್ತಲೇ ಇರುತ್ತೇವೆ. ಹಾಗೆ ಭೇಟಿ ಕೊಟ್ಟಾಗ ಅಲ್ಲಿಯ ದೇವರುಗಳ ಫೋಟೋ ಒಂದನ್ನು ತರುವುದು ಹೆಂಡತಿಗೆ ರೂಢಿಯಾಗಿ ಬಿಟ್ಟಿದೆ. ಹೀಗೆ ಕರ್ನಾಟಕದ ಅನೇಕ ದೈವ ಒಂದೇ ದೇವರ ಅನೇಕ ಫೋಟೋಗಳು, ಇಡಗುಂಜಿಯ ಗಣಪತಿ, ಮಧೂರಿನ ಗಣಪತಿ ಜೊತೆಗೆ ಆನೆಗುಡ್ಡೆಯ ಗಣಪತಿ! ನಂಜನಗೂಡಿನ ನಂಜುಂಡೇಶ್ವರ, ಧರ್ಮಸ್ಥಳದ ಮಂಜುನಾಥ, ಕೊಲ್ಲೂರಿನ ಮೂಕಾಂಬಿಕೆ, ಶೃಂಗೇರಿಯ ಶಾರದೆ, ಹೊರನಾಡಿನ ಅನ್ನಪೂರ್ಣೇಶ್ವರಿ ಹೀಗೆ ಒಂದೇ ತರಹದ ದೇವರು. ಎಲ್ಲ ಸಿಂಪ್ಲಿಫೈ ಮಾಡಿ ಒಂದೊಂದು ದೇವರುಗಳ ಫೋಟೋಗಳನ್ನು ಮಾತ್ರ ಒಯ್ಯೋಣ ಎಂದು ನಿರ್ಧರಿಸಿದೆವು. ಆದರೆ ಉಳಿದ ದೇವರನ್ನು ಏನು ಮಾಡೋದು? ಅಂತ ಯೋಚಿಸುತ್ತಿರುವಷ್ಟರಲ್ಲಿಯೇ ಹೆಂಡತಿ ಶಾಸ್ತ್ರ ಕೇಳಿಸಿದಳು. ಆ ಪುಣ್ಯಾತ್ಮ ಆ ಫೋಟೋಗಳನ್ನು ಕಾಶಿಯ ಗಂಗೆಯಲ್ಲಿ ಬಿಡಬೇಕೆಂದೂ, ಇಲ್ಲವಾದರೆ ಪ್ರತಿ ಫೋಟೋದೊಂದಿಗೆ ಸಾವಿರದ ಒಂದು ರೂಪಾಯಿ ಕಾಣಿಕೆ ಇಟ್ಟು ತನಗೆ ಕೊಡಬೇಕೆಂದೂ ಹೇಳಿದ!

ಲೆಕ್ಕ ಮಾಡಿದರೆ ಫೋಟೋಗಳು ಹದಿನೈದು ಇಪ್ಪತ್ತು ಇದ್ದವು! ಕಾಶಿಗೆ ಹೋದರೂ, ಈ ಪುಣ್ಯಾತ್ಮನಿಗೆ ಕೊಟ್ಟರೂ ಕೆಲವು ಸಾವಿರಗಳು ನಷ್ಟ ಗ್ಯಾರಂಟಿ ಅಂತ ಯೋಚಿಸಿ ಹಾಗೇ ಇಟ್ಟುಕೊಂಡೆ. ಯಾವ ದೇವರಿಗೂ ಬೇಸರ ಮಾಡುವುದು ಬೇಡ ಅಂತ ನಿರ್ಧರಿಸಿ ಹೊಸ ಮನೆಯ ತುಂಬ ನೇತು ಹಾಕುವುದು ಅಂತ ನಿರ್ಧರಿಸಿದೆ.

ಮನೆಯಲ್ಲಿ ಇಷ್ಟೆಲ್ಲ ವಸ್ತುಗಳು ಸಂಗ್ರಹವಾಗಲು ಏನು ಕಾರಣ ಅಂತ ಯೋಚಿಸಿದೆ. ಬರುವ ಸಂಬಳ ಹೆಚ್ಚಾಗಿದೆ. ಜೀವನ ಮಟ್ಟ ಸುಧಾರಿಸಿದೆ. ಕೊಳ್ಳುಬಾಕ ಸಂಸ್ಕೃತಿ ನಮ್ಮನ್ನು ಬೇಕಾದುದಕ್ಕಿಂತ ಬೇಡವಾದುದನ್ನೇ ಕೊಳ್ಳುವಂತೆ ಮಾಡುತ್ತದೆ. ಹಾಗಾಗಿ ಒಂದು ವಸ್ತುವಿಗೆ ನಾಲ್ಕಾರು ಇತರೇತರಗಳು ಬಂದು ಸೇರಿಕೊಳ್ಳುತ್ತವೆ. ಪೊರಕೆ ಕೊಂಡುಕೊಳ್ಳಲು ಸೂಪರ್ ಮಾರ್ಕೆಟ್‌ಗೆ ಹೋದ ಹೆಂಡತಿ, ಕಸ ಬಳಿಯುವ ಮೊರಗ, ಫಿನಾಯಿಲ್, ಹಾರ್ಪಿಕ್, ಟಾಯ್ಲೆಟ್ ತಿಕ್ಕುವ ಬ್ರಷ್, ಬ್ಲೀಚಿಂಗ್ ಪೌಡರ್‌ನ ಒಂದು ಪ್ಯಾಕೆಟ್ ಹಾಗೂ ಟಾಯ್ಲೆಟ್‌ನಲ್ಲಿ ದುರ್ವಾಸನೆ ಬರದಂತೆ ತಡೆಯುವ ಪರಿಮಳದ ಗೋಲಿಯ ಸೆಟ್ಟಿನೊಂದಿಗೆ ಬಂದಿದ್ದಳು. ಕೇಳಿದರೆ ಮುನ್ನೂರ ತೊಂಭತ್ತೊಂಬತ್ತು ರೂಪಾಯಿಗೆ ಆಫರ್ ಇತ್ತು ಎಂದಳು. ಇಂಥ ಆಫರ್ ಎಂಬ ಮಾಯಾಲೋಕ ನನ್ನಂಥವರನ್ನು ದಿಕ್ಕು ತಪ್ಪಿಸುತ್ತವೆ. ಇದು ಒಂದು ಕಾರಣ.

ಇನ್ನೊಂದು ಬಹು ಮುಖ್ಯ ಕಾರಣ ಎಂದರೆ, ಇತ್ತೀಚೆಗಿನ ದಿನಗಳಲ್ಲಿ ಎಲ್ಲ ಐಟಮ್ಮುಗಳೂ ಯೂಸ್ ಆ್ಯಂಡ್ ಥ್ರೋ ಜಾತಿಗೆ ಸೇರಲ್ಪಡುತ್ತಿವೆ. ರಿಪೇರಿ ಎಂಬ ಬಾಬತ್ತು ಇಲ್ಲವಾಗುತ್ತಿದೆ. ನಾವೇನೋ ಯೂಸ್ ಮಾಡುತ್ತೇವೆ. ಹಾಗೆಂದು ಸಾವಿರಾರು ರುಪಾಯಿ ಕೊಟ್ಟು ಖರೀದಿಸಿದ ಐಟಮ್ಮುಗಳನ್ನು ಹಾಗೆಯೇ ಎಸೆಯಿರಿ ಎಂದರೆ ಸಾಧ್ಯವೇ? ಎಕ್ಸ್ ಚೇಂಜ್ ಆಫರ್‌ನಲ್ಲಿ ಬದಲಾಯಿಸಲು ಹೋದಾಗ ಹನ್ನೆರಡು ಸಾವಿರ ಕೊಟ್ಟಿದ್ದ ಫ್ರಿಜ್ಜಿಗೆ ಎಂಟು ನೂರು ರೂಪಾಯಿ ಅಂದಿದ್ದ. ಸಿಟ್ಟಿನಿಂದ ಬದಲಾಯಿಸದೆ ಹೊಸದರೊಟ್ಟಿಗೆ ಹಳೆಯದನ್ನೂ ಹಾಗೆಯೇ ಇರಿಸಿಕೊಂಡಿದ್ದೆ. ಹೀಗಾಗಿ ಎಲ್ಲ ಕಾರಣಗಳಿಂದಾಗಿ ಮನೆಯ ತುಂಬ ಸಾಮಾನು.

'ಸಾರ್ .... ನನ್ನ ಜೀವನದಲ್ಲಿ ಇಲ್ಲೀ ತಂಕಾ ತುಂಬ ಮನೆಗಳ ಸಾಮಾನು ಶಿಫ್ಟ್ ಮಾಡಿದ್ದೇನೆ, ನಿಮ್ಮ ಹಾಗೆ ರಾಶಿ ಹಾಕ್ಕೊಂಡಿದ್ದವರನ್ನು ನಾನು ನೋಡಿಲ್ಲ..' ಸಾಮಾನು ಸಾಗಿಸುವಾತ ಪ್ರಶಸ್ತಿ ಕೊಟ್ಟ! ಎರಡೆರಡು ಲೋಡು ಸಾಮಾನುಗಳನ್ನು ಲಾರಿಯಲ್ಲಿ ಒಯ್ದು ಮೇಲೂ ಟೆಂಪೋದಲ್ಲಿ ಇನ್ನೊಂದು ಬಾರಿ ಒಯ್ಯುವಷ್ಟಿತ್ತು.

ಸರಿ, ಅಂತೂ ಹೊಸ ಮನೆಗೆ ತಂದು ಹಾಕಿದ್ದಾಯ್ತು. ಅಲ್ಲಲ್ಲಿ ಇಟ್ಟಿದ್ದೂ ಆಯ್ತು. ಏನು ಮಾಡಿದರೂ ಒತ್ತರೆಯಾಗಿ ಇಡಲು ಸಾಧ್ಯವಾಗಲೆ ಇಲ್ಲ.



ಸಾಮಾನು ರಾಶಿಯ ನಡುವೆ ಒಂದೇ ಅಡಿ ಜಾಗ. ಪುಣ್ಯಕ್ಕೆ ಕುಮಾರವ್ಯಾಸ ನಂಥ ಕವಿಗಳು ನನ್ನ ಪರಿಸ್ಥಿತಿಯನ್ನು ನೋಡಲಿಲ್ಲ. ನೋಡುತ್ತಿದ್ದರೆ, 'ತಿಣುಕಿದನು ಮನೆರಾಯ ಬೇಡಾಗಿರುವ ಗುಜರಿಯ ಭಾರದಲಿ ತಿಂತಿಣಿಯ ಹೊಸ ವಸ್ತು ಲೋಕದಲಿ ಕಾಲಿಡಲು ತೆರಪಿಲ್ಲ' ಎನ್ನುತ್ತಿದ್ದ.

ನಿತ್ಯವೂ ಹೊಸ ಮನೆಯಲ್ಲಿ ಇಕ್ಕಟ್ಟಾದ ಜಾಗದಲ್ಲಿ ಓಡಾಡಿ ಸುಸ್ತಾಗಿ ಕೊನೆಗೆ ರೋಸಿ ಹೋದೆ. ಹಳೆಯ ವಸ್ತುಗಳನ್ನು ಹೇಗಾದರಾಗಲಿ ಮಾರಾಟ ಮಾಡುವುದು ಅಥವಾ ಗುಜರಿಗೆ ಹಾಕುವುದೇ ಸರಿ ಎಂದು ನಿರ್ಧರಿಸಿದೆ. ಹೆಂಡತಿಯು ತೌರು ಮನೆಗೆ ಹೋಗಿದ್ದಳು. ನಾನು ನಿರಂಕುಶಮತಿ, ಏನಾದರಾಗಲಿ ಎಂದು ಬೇಡವಾದವುಗಳನ್ನೆಲ್ಲ ಹೊರಗಿಟ್ಟೆ. ಗುಜರಿಯವನ ಬಳಿ ಮಾತಾಡಿದೆ. ಆತ ರೇಟು ಫಿಕ್ಸ್ ಮಾಡಿದ, ಒಪ್ಪಿದೆ. ಸಂಜೆ ಬರುತ್ತೇನೆ ಎಂದ. ಸಂಜೆ ನಾನು ಆಫೀಸಿನಿಂದ ಬರುವಾಗ ಚಿತ್ರಣವೇ ಬೇರೆಯಾಗಿತ್ತು. ಹೊರಗೆ ಇಟ್ಟಿದ್ದ ಸಾಮಾನುಗಳೆಲ್ಲ ಮರಳಿ ಒಳಗೆ ಪ್ರವೇಶಿಸಿದ್ದವು. ಹೆಂಡತಿ ಮರಳಿದ್ದಳು. ಅನಿರೀಕ್ಷಿತ ಆಘಾತ. ಜೊತೆಗೆ ಊರಿನಿಂದ ಅಮ್ಮನೂ ಬಂದಿದ್ದಳು. ಮನೆಯ ಹೊರಗೆ ಊರಿನಿಂದ ಆಕೆ ತಂದಿದ್ದ ಕೆಲವು ವಸ್ತುಗಳೂ ಇದ್ದವು. ಅವಳ ಅಪ್ಪ ಅಜ್ಜ ಎಲ್ಲ ಉಪಯೋಗಿಸುತ್ತಿದ್ದವು. ಮಾತ್ರವಲ್ಲ ನವಿಲು ಕೆತ್ತನೆ ಮಂಚವೂ ಇತ್ತು! 'ಇವನ್ನೆಲ್ಲ ಯಾಕೆ ತಂದೆ? ಮೊದಲೇ ಇಲ್ಲಿ ಜಾಗ ಇಲ್ಲ. ಇದ್ದ ಹಳೆಯದನ್ನೇ ಗುಜರಿಗೆ ಹಾಕುವ ಅಂತ ತೆಗೆದಿಟ್ಟಿದ್ದೆ. ಜೊತೆಗೆ ನಿಂದು ಬೇರೆ ಕೇಡು' ಅಂತ ಕೂಗಾಡಿದೆ. ಆಗ ಅಮ್ಮ ಕಣ್ಣು ನೀರು ತುಂಬಿ ಕೊಂಡು 'ನಂಗೂ ವಯಸ್ಸಾಯ್ತು ನನ್ನನ್ನೂ ಗುಜರಿಗೆ ಹಾಕ್ತೀಯಾ?' ಅಂತ ಕೇಳಿದಳು. ಮತ್ತೆ ಮಾತೇ ಇಲ್ಲ. ಮಾರನೆಯ ದಿನ ಬೆಳಿಗ್ಗೆ ಇನ್ನೂ ಕಣ್ಣು ಬಿಟ್ಟರಲಿಲ್ಲ. ಒಂದು ಲಗೇಜ್ ವ್ಯಾನು ಬಂದು ನಿಂತಿತ್ತು. ಸಾರ್ ಅಂದ. ಏನೋ ಅಂದೆ. 'ನಿಮ್ಮ ಮನೆಗೆ ಹೊಸ ಸೋಫಾ ಸೆಟ್, ದಿವಾನಾ ಕಾಟ್ ಹಾಕಿ ಅಂತ ಅಮ್ಮಾವ್ರು ಹೇಳಿದ್ದಾರೆ' ಅಂದವನೇ ನನ್ನ ಅನುಮತಿಗೂ ಕಾಯದೆ ಒಳಗೆ ತಂದು ಹಾಕಿ ಮೂವತ್ತೈದು ಸಾವಿರ ಬಿಲ್ ಕೊಟ್ಟು ಹೊರಟೇ ಹೋದ. ಅವಳ ಮುಖ ನೋಡಿದೆ. ದಿಗ್ವಿಜಯ ಸಾಧಿಸಿದ ನಗುವಿತ್ತು. ಇದೀಗ ನಾನು, 'ಹೊಸ ಮಾಲು ಹಳೆ ಗುಜರಿ ಕೂಡಿರಲು ಮನೆ ಹೊಲಸು' ಅಂತ ಗೊಣಗುತ್ತಿದ್ದೇನೆ, ಅಮ್ಮ, ಹೆಂಡತಿಗೆ ಕೇಳಿಸದಂತೆ!

*(ಸುಧಾ ಯುಗಾದಿ ವಿಶೇಷಾಂಕ 2015 ರ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಪ್ರಬಂಧ)*